## ಅನುಬಂಧ – I

## ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ನೀತಿ

## ವಿಷಯಸೂಚಿ


| | ಪರಿವಿಡಿ | ಪುಟ ಸಂ. |
|---|---|---|
| 1 | ಪರಿಚಯ | 1 |
| 2 | ಹಿನ್ನೆಲೆ | 1 |
| 3 | 2013 ರ ಕಂಪನಿಗಳ ಕಾಯ್ದೆಯ ಉಪಬಂಧಗಳು, ಅದರಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು ಸಿಎಸ್ಆರ್ ಮೇಲಿನ ಅನುಸೂಚಿ VII | 2 |
| 4 | ಸಿಎಸ್ಆರ್ ಪಾಲಿಸಿಯಡಿಯಲ್ಲಿ ಒಳಗೊಳ್ಳುವ ಚಟುವಟಿಕೆಗಳು | 3 |
| 5 | ಸಿಎಸ್ಆರ್ ಪಾಲಿಸಿಯ ಉದ್ದೇಶ | 3 |
| 6 | ಸಿಎಸ್ಆರ್ ಸಮಿತಿಯ ಪಾತ್ರ | 4 |
| 7 | ನಿರ್ದೇಶಕ ಮಂಡಳಿ ಮತ್ತು ಹಿರಿಯ ಆಡಳಿತವರ್ಗದ ಪಾತ್ರ | 4 |
| 8 | ಸಿಎಸ್ಆರ್ ಪಾಲಿಸಿಯ ಅನುಷ್ಠಾನಗೊಳಿಸುವಿಕೆ | 5 |
| 9 | ವರದಿ ಮಾಡುವಿಕೆ | 5 |
| 10 | ಅವಲೋಕಿಸುವಿಕೆ ಮತ್ತು ಪುನರಾವಲೋಕನ | 5 |

## 1. ಪರಿಚಯ

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಎಂಬುದು ನೈತಿಕ ಮೌಲ್ಯಗಳನ್ನು ಆದರಿಸುವ, ಕಾನೂನಾತ್ಮಕ ಸಮಸ್ಯೆಗಳನ್ನು ಉದ್ದೇಶಿಸುವ ಹಾಗೂ ಕಾರ್ಯಪಡೆ ಮತ್ತವರ ಕುಟುಂಬದ ಹಾಗೂ ಸ್ಥಳೀಯ ಸಮುದಾಯದ ಮತ್ತು ಒಟ್ಟಾರೆಯಾಗಿ ಸಮಾಜದ ಗುಣಮಟ್ಟವನ್ನು ಸುಧಾರಿಸುತ್ತಿರುವಂತೆಯೇ ಆರ್ಥಿಕ ಅಭಿವೃದ್ಧಿಗೆ ಕೊಡುಗೆಯನ್ನು ನೀಡುವ ರೀತಿಗಳಲ್ಲಿ ವಾಣಿಜ್ಯಾತ್ಮಕ ಯಶಸ್ಸನ್ನು ಸಾಧಿಸುವ, ವ್ಯವಹಾರದ ನಿರಂತರ ಬದ್ಧತೆಯಾಗಿದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಈ ಕಲ್ಪನೆಯು ವ್ಯವಹಾರ ಜಗತ್ತಿಗೆ ಹೊಸದೇನಲ್ಲ.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯು ಸ್ಪಷ್ಟವಾಗಿ ಸಾಮರ್ಥ್ಯ ನಿರ್ಮಾಣ, ಸಮುದಾಯಗಳ ಸಬಲೀಕರಣ, ಸೇರ್ಪಡೆಯುಕ್ತ ಸಾಮಾಜಿಕ-ಆರ್ಥಿಕ ಬೆಳವಣಿಗೆ, ಪರಿಸರ ಸಂರಕ್ಷಣೆ, ಹಸಿರು ಮತ್ತು ವಿದ್ಯುತ್ ಸಕ್ಷಮ ತಾಂತ್ರಿಕತೆಗಳ ಉತ್ತೇಜನ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಮತ್ತು ಸಮಾಜದ ಬಡ ಹಾಗೂ ಸೌಕರ್ಯವಂಚಿತ ವಿಭಾಗದ ಉತ್ಥಾನ ಮುಂತಾದ ಸಂಗತಿಗಳ ಮೇಲೆ ಕೇಂದ್ರೀಕರಿಸುತ್ತದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಹೊರಹೊಮ್ಮುತ್ತಿರುವ ಈ ಪರಿಕಲ್ಪನೆಯು ಔದಾರ್ಯತೆಯಾಚೆಗೆ ಸಾಗುತ್ತಾ, ಸಂಸ್ಥೆಯು ತನ್ನ ಕಾನೂನಾತ್ಮಕ ಬಾಧ್ಯತೆಗಳಾಚೆಗೆ ಕ್ರಿಯಾಶೀಲವಾಗುವುದನ್ನು ಹಾಗೂ ಸಾಮಾಜಿಕ, ಪರಿಸರಾತ್ಮಕ ಹಾಗೂ ನೈತಿಕ ಕಳಕಳಿಗಳನ್ನು ಸಂಸ್ಥೆಯ ವ್ಯವಹಾರ ಪ್ರಕ್ರಿಯೆಯೊಳಗಡೆ ಏಕೀಕರಿಸಿಗೊಳ್ಳುವುದನ್ನು ಬೇಡುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯು ಜಾಗತಿಕ ಮಟ್ಟದಲ್ಲಿನ ಒಂದು ಪ್ರಮುಖ ವಿಷಯವಾಗಿದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಈ ಪರಿಕಲ್ಪನೆಯು, ಸಾಮಾಜಿಕವಾಗಿ ಬಾಧ್ಯಸ್ಥರಾಗಿರುವ ರೀತಿಯಲ್ಲಿ ಕಾರ್ಯಾಚರಿಸುವ, ಸಂಸ್ಥೆಯೊಂದರ ಬದ್ಧತೆಯನ್ನು ಗುರುತಿಸುತ್ತದೆ. ಸಾಂಸ್ಥಿಕ ಆರ್ಥಿಕ ನಿರ್ಧಾರಗಳ ಸಾಮಾಜಿಕ ಹಾಗೂ ಪರಿಸರಾತ್ಮಕ ಇಂಗಿತಾರ್ಥಗಳನ್ನು ಇದು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಸಾಂಸ್ಥಿಕ ಆಡಳಿತ ಹಾಗೂ ನೈತಿಕ ವ್ಯವಹಾರ ಕಾರ್ಯವಿಧಾನಗಳೊಂದಿಗೂ ಸಹ ಇದು ಸಹಯೋಗವನ್ನು ಹೊಂದಿದೆ.

## 2. ಹಿನ್ನೆಲೆ:

ಭಾರತೀಯ ಸಂಸ್ಥೆಗಳು ವ್ಯವಹಾರವನ್ನು ನಡೆಸುವ ವಿಧಾನವನ್ನು ಬದಲಾಯಿಸುವ ಹಲವಾರು ಉಪಬಂಧಗಳನ್ನು 2013 ರ ಕಂಪನಿಗಳ ಕಾಯ್ದೆಯು ಪರಿಚಯಿಸಿದೆ ಹಾಗೂ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಚಟುವಟಿಕೆಗಳ ಮೇಲೆ ವ್ಯಯಿಸುವಿಕೆಯು ಇಂಥ ಒಂದು ಉಪಬಂಧವಾಗಿದೆ. ಸಂಸ್ಥೆಗಳಿಂದ ಒಟ್ಟಾರೆಯಾಗಿ ಸ್ವ-ಇಚ್ಛಾಪೂರ್ವಕ ಕೊಡುಗೆಯಾಗಿದ್ದಂಥ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಈಗ ಕಾನೂನಿನಡಿಯಲ್ಲಿ ಕಡ್ಡಾಯಗೊಳಿಸಲಾಗಿದೆ.

ಸಾಂಸ್ಥಿಕ ವ್ಯವಹಾರಗಳ ಸಚಿವಾಲಯವು (ಎಮ್‌ಸಿಎ) 27ನೇ ಫೆಬ್ರುವರಿ, 2014 ರ ದಿನಾಂಕದ ತನ್ನ ಅಧಿಸೂಚನೆಯ ಮೂಲಕ ಹಾಗೂ 2013 ರ ಕಂಪನಿಗಳ ಕಾಯ್ದೆಯ ಪರಿಚ್ಛೇದ 1(3) ರ ಮೂಲಕ ಪ್ರದತ್ತವಾದ ಅಧಿಕಾರಗಳ ಚಲಾವಣೆಯಲ್ಲಿ ಪರಿಚ್ಛೇದ 135 ರ ಉಪಬಂಧಗಳು ಹಾಗೂ ಅನುಸೂಚಿ VII (ಈ ಪರಿಚ್ಛೇದದ

ಉದ್ದೇಶಕ್ಕಾಗಿ ಈ ಉಪಬಂಧವನ್ನು ಅಗತ್ಯವಾಗಿ ಅನುಸರಣೆ ಮಾಡಬೇಕಾದ ಕಂಪನಿಗಳನ್ನು ಮತ್ತು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕಾ ಚಟುವಟಿಕೆಗಳು ಎಂಬುದಾಗಿ ಪರಿಗಣಿಸಬಹುದಾದ ಚಟುವಟಿಕೆಗಳನ್ನು ವ್ಯಾಖ್ಯಾನಿಸುತ್ತದೆ) ಇವುಗಳು ಜಾರಿಗೆ ಬರುವ ದಿನಾಂಕವಾಗಿ 1ನೇ ಏಪ್ರಿಲ್, 2014 ನ್ನು ಸೂಚಿತಗೊಳಿಸಿದೆ.

## 3. 2013 ರ ಕಂಪನಿಗಳ ಕಾಯ್ದೆಯ ಪರಿಚ್ಛೇದ 135 ರ ಉಪಬಂಧಗಳು, ಅದರಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು ಸಿಎಸ್ಆರ್ ಮೇಲಿನ ಅನುಸೂಚಿ VII:

2013 ರ ಕಂಪನಿಗಳ ಕಾಯ್ದೆಯ ಪರಿಚ್ಛೇದ 135(1) ತಿಳಿಸುವಂತೆ:

- ರೂ.500 ಕೋಟಿ ಅಥವಾ ಮೇಲ್ಪಟ್ಟ ನೆಟ್‌ವರ್ಥ್, ಅಥವಾ
- ರೂ.1000 ಕೋಟಿ ಅಥವಾ ಮೇಲ್ಪಟ್ಟ ವಹಿವಾಟು ನಡೆಸುವ, ಅಥವಾ
- ಯಾವುದೇ ಆರ್ಥಿಕ ವರ್ಷದಲ್ಲಿ ರೂ.5 ಕೋಟಿ ಅಥವಾ ಮೇಲ್ಪಟ್ಟ ನಿವ್ವಳ ಲಾಭವನ್ನು

ಹೊಂದಿರುವ ಪ್ರತಿ ಕಂಪನಿಯು ಮೂವರು ಅಥವಾ ಹೆಚ್ಚು ನಿರ್ದೇಶಕರನ್ನು ಒಳಗೊಂಡಿರುವ, ಅವರ ಪೈಕಿ ಕನಿಷ್ಠ ಒಬ್ಬರು ಸ್ವತಂತ್ರ್ಯ ನಿರ್ದೇಶಕರಾಗಿರುವಂಥ ಮಂಡಳಿಯನ್ನು ಹೊಂದಿರುವ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕಾ ಸಮಿತಿಯೊಂದನ್ನು ರಚಿಸತಕ್ಕದ್ದು.

ಈ ಕಾಯ್ದೆಯ 135(5) ಪರಿಚ್ಛೇದವು ಹೇಳುವಂತೆ, ಉಪ-ಪರಿಚ್ಛೇದ (1) ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಪ್ರತಿ ಕಂಪನಿಯ ಮಂಡಳಿಯು, ಸಿಎಸ್ಆರ್ ಪಾಲಿಸಿಗೆ ಅನುಸಾರವಾಗಿ, ಪ್ರತಿ ಆರ್ಥಿಕ ವರ್ಷದಲ್ಲಿ ತಕ್ಷಣ ಹಿಂದಿನ ಮೂರು ಆರ್ಥಿಕ ವರ್ಷಗಳ ಅವಧಿಯಲ್ಲಿ ಮಾಡಿದ ಕಂಪನಿಯ ಸರಾಸರಿ ನಿವ್ವಳ ಲಾಭಗಳ ಕನಿಷ್ಠ ಎರಡು ಪ್ರತಿಶತವನ್ನು ಆ ಕಂಪನಿಯು ವ್ಯಯಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು:

ಸಿಎಸ್ಆರ್ ಚಟುವಟಿಕೆಗಳಿಗಾಗಿ ಗುರುತಿಸಲ್ಪಟ್ಟಂಥ ಈ ಮೊತ್ತವನ್ನು ವ್ಯಯಿಸುವುದಕ್ಕಾಗಿ ಆ ಕಂಪನಿಯು ತಾನು ಕಾರ್ಯಾಚರಿಸುವ ಸ್ಥಳೀಯ ಪ್ರದೇಶ ಮತ್ತು ಅದರ ಸುತ್ತಲಿನ ಪ್ರದೇಶಕ್ಕೆ ಆದ್ಯತೆಯನ್ನು ನೀಡತಕ್ಕದ್ದು ಎಂಬ ಷರತ್ತಿಗೆ ಇದು ಒಳಪಟ್ಟಿರುತ್ತದೆ:

ಮುಂದುವರೆದು, ಇಂಥ ಮೊತ್ತವನ್ನು ವ್ಯಯಿಸಲು ಆ ಕಂಪನಿಯು ವಿಫಲವಾದಲ್ಲಿ, ಪರಿಚ್ಛೇದ 134 ರ ಉಪ-ಪರಿಚ್ಛೇದ (3) ರ ಖಂಡ (o) ಅಡಿಯಲ್ಲಿ (ಇತರ ವಿಷಯಗಳ ಜೊತೆಯಲ್ಲಿ ಆ ವರ್ಷದಲ್ಲಿ ಕೈಗೊಳ್ಳಲಾದ ಸಿಎಸ್ಆರ್ ಉಪಕ್ರಮಗಳ ಮೇಲೆ ಆ ಕಂಪನಿಯಿಂದ ಅಭಿವೃದ್ಧಿಪಡಿಸಲ್ಪಟ್ಟು, ಅನುಷ್ಠಾನಗೊಳಿಸಲ್ಪಟ್ಟ ನೀತಿಯ ಬಗೆಗಿನ ವಿವರಗಳನ್ನು ಒದಗಿಸತಕ್ಕಂಥ ನಿರ್ದೇಶಕರ ವರದಿಯನ್ನು ಸಾಮಾನ್ಯ ಸಭೆಯಲ್ಲಿ ಕಂಪನಿಯ ಮುಂದೆ ಇರಿಸುವ ಹೇಳಿಕೆಗೆ ಲಗತ್ತಿಸುವ ಉಪಬಂಧ) ಮಾಡಲಾಗುವ ತನ್ನ ವರದಿಯಲ್ಲಿ, ಈ ಮೊತ್ತವನ್ನು ವ್ಯಯಿಸದಿರುವಿಕೆಗೆ ಕಾರಣಗಳನ್ನು ಆ ಮಂಡಳಿಯು ನಿರ್ದಿಷ್ಟಪಡಿಸತಕ್ಕದ್ದು ಎಂಬ ಷರತ್ತಿಗೆ ಇದು ಒಳಪಟ್ಟಿರುತ್ತದೆ.

ಮುಂದುವರೆದು, ತಮ್ಮ ಸಿಎಸ್ಆರ್ ಪಾಲಿಸಿಯಲ್ಲಿ ಕಂಪನಿಗಳಿಂದ ಒಳಗೊಳ್ಳಬಹುದಾದ ಚಟುವಟಿಕೆಗಳನ್ನು 2013 ರ ಕಾಯ್ದೆಯ ಅನುಸೂಚಿ VII ನಿರ್ದಿಷ್ಟಪಡಿಸುತ್ತದೆ. ಅದಕ್ಕನುಗುಣವಾಗಿ, ಈ ಪಾಲಿಸಿಯು ಈ ಚಟುವಟಿಕೆಗಳನ್ನು ನಿರ್ದಿಷ್ಟಪಡಿಸುತ್ತದೆ.

## 4. ಸಿಎಸ್‌ಆರ್ ಪಾಲಿಸಿಯಡಿಯಲ್ಲಿ ಒಳಗೊಳ್ಳುವ ಚಟುವಟಿಕೆಗಳು:

ಈ ಚಟುವಟಿಕೆಗಳು ಇವುಗಳನ್ನು ಒಳಗೊಳ್ಳುತ್ತವೆ:

i. ತೀವ್ರ ಹಸಿವು ಮತ್ತು ಬಡತನವನ್ನು ನಿರ್ಮೂಲನ ಮಾಡುವುದು

ii. ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು

iii. ಲಿಂಗ ಸಮಾನತೆಯನ್ನು ಪ್ರೋತ್ಸಾಹಿಸುವುದು ಹಾಗೂ ಮಹಿಳೆಯರನ್ನು ಸಬಲೀಕರಿಸುವುದು

iv. ಶಿಶು ಮರಣಪ್ರಮಾಣವನ್ನು ಕಡಿಮೆ ಮಾಡುವುದು ಹಾಗೂ ಮಾತೃ ಆರೋಗ್ಯವನ್ನು ಸುಧಾರಿಸುವುದು

v. ಹ್ಯೂಮನ್ ಇಮ್ಯುನೊಡೆಫಿಶಿಯನ್ಸಿ ವೈರಸ್, ಅಕ್ವೈರ್ಡ್ ಇಮ್ಯೂನ್ ಡೆಫಿಶಿಯನ್ಸಿ ಸಿಂಡ್ರೊಮ್, ಮಲೇರಿಯಾ ಮತ್ತು ಇತರ ಕಾಯಿಲೆಗಳ ವಿರುದ್ಧ ಹೋರಾಡುವುದು

vi. ಪರಿಸರಾತ್ಮಕ ಸುಸ್ಥಿರತೆಯನ್ನು ಕಾಯ್ದುಕೊಳ್ಳುವುದು

vii. ವೃತ್ತಿ ಕೌಶಲ್ಯಗಳನ್ನು ವರ್ಧಿಸುವ ಉದ್ಯೋಗ ನೀಡುವುದು

viii. ಸಾಮಾಜಿಕ ವ್ಯವಹಾರ ಯೋಜನೆಗಳು

ix. ಸಾಮಾಜಿಕ-ಆರ್ಥಿಕ ಬೆಳವಣಿಗೆ ಮತ್ತು ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿ ಅಥವಾ ಇತರ ಯಾವುದೇ ನಿಧಿ ಮತ್ತು ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳು, ಅಲ್ಪ ಸಂಖ್ಯಾತರು ಮತ್ತು ಮಹಿಳಾ ಕಲ್ಯಾಣ ನಿಧಿಗಳಿಗೆ ಕೊಡುಗೆಗಳನ್ನು ನೀಡುವುದು.

x. ಅನುಮತಿಸಬಹುದಾದಂಥ ಇತರ ಚಟುವಟಿಕೆಗಳು.

## 5. ಸಿಎಸ್‌ಆರ್ ಪಾಲಿಸಿಯ ಉದ್ದೇಶ:

ಈ ಪಾಲಿಸಿಯ ಪ್ರಮುಖ ಉದ್ದೇಶಗಳು:

- 2013 ರ ಕಂಪನಿಗಳ ಕಾಯ್ದೆಯ ಪರಿಚ್ಛೇದ 135 ರ ಅಗತ್ಯತೆಗಳನ್ನು ಹಾಗೂ ಅದರಡಿಯಲ್ಲಿ ರೂಪಿಸಿದ ನಿಯಮಗಳನ್ನು ಅನುಸರಣೆ ಮಾಡುವುದು.
- ನಿರ್ಧರಿಸಲ್ಪಟ್ಟ ಮಟ್ಟಿಗೆ ಕೊಡುಗೆಯನ್ನು ನೀಡುವುದಕ್ಕಾಗಿ, ಅನುಸೂಚಿ VII ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಚಟುವಟಿಕೆಗಳಲ್ಲಿ ಚಟುವಟಿಕೆಯನ್ನು/ಗಳನ್ನು ಗುರುತಿಸುವ ಸೂಕ್ತ ಕಾರ್ಯವಿಧಾನಗಳನ್ನು ನಿಗದಿಪಡಿಸುವುದು.
- ಈ ನೀತಿಯನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮಂಡಳಿಯ ಸಿಎಸ್‌ಆರ್ ಸಮಿತಿಯನ್ನು ಸೂತ್ರೀಕರಿಸುವುದು ಹಾಗೂ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ, ಮಂಡಳಿಗೆ ಶಿಫಾರಸ್ಸು ಮಾಡುವುದು:
  - ಅನುಸೂಚಿ VII ರಲ್ಲಿ ನಿರ್ದಿಷ್ಟಪಡಿಸಿದ ಚಟುವಟಿಕೆಗಳಲ್ಲಿ ಗುರುತಿಸಬೇಕಿರುವ ಚಟುವಟಿಕೆ/ಗಳು
  - ಹೀಗೆ ಗುರುತಿಸಿದ ಚಟುವಟಿಕೆಗಳ ಮೇಲೆ ಭರಿಸಬೇಕಿರುವ ಖರ್ಚಿನ ಮೊತ್ತ.
- ವಿನಿಯಾಮಕ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಕಂಪನಿಯ ಅನುಸರಣೆಯನ್ನು ತೃಪ್ತಿಕರವಾಗಿ ಪೂರೈಸಲಾಗಿರುವುದನ್ನು ಖಚಿತಪಡಿಸಿಕೊಳ್ಳಲು ಅನುವಾಗುವಂತೆ ಅನುಸರಣೆಯ ಮಟ್ಟವನ್ನು ಆಗಾಗ್ಗೆ ಅವಲೋಕಿಸುವುದು.

## 6. ಸಿಎಸ್‌ಆರ್ ಸಮಿತಿಯ ಪಾತ್ರ:

ಸಿಎಸ್‌ಆರ್ ಸಮಿತಿಯ ಪಾತ್ರವು ಇವುಗಳನ್ನು ಒಳಗೊಳ್ಳುತ್ತದೆ:

- ಮಂಡಳಿಗೆ ಸಿಎಸ್‌ಆರ್ ಪಾಲಿಸಿಯೊಂದನ್ನು ಶಿಫಾರಸ್ಸು ಮಾಡುವುದು, ಅವಶ್ಯವಾದಲ್ಲಿ, ಆಗಾಗ್ಗೆ ಅದರ ಪುನರಾವಲೋಕನ / ಪರಿಷ್ಕರಣೆಯನ್ನೂ ಸಹ ಮಾಡುವುದು,
- ಈ ಮೇಲಿನ ಖಂಡ 4 ರಲ್ಲಿ ನಿರ್ದಿಷ್ಟಪಡಿಸಿರುವ ಚಟುವಟಿಕೆಗಳಲ್ಲಿ ಚಟುವಟಿಕೆಯನ್ನು/ಗಳನ್ನು ಗುರುತಿಸಿ, ಮಂಡಳಿಗೆ ಶಿಫಾರಸ್ಸು ಮಾಡುವುದು.
- ಗುರುತಿಸಿದ ಚಟುವಟಿಕೆಯ/ಗಳ ಮೇಲೆ ವ್ಯಯಿಸಬೇಕಿರುವ / ಕೊಡುಗೆ ನೀಡಬೇಕಿರುವ ಮೊತ್ತವನ್ನು ಮಂಡಳಿಗೆ ಶಿಫಾರಸ್ಸು ಮಾಡುವುದು.

## 7. ನಿರ್ದೇಶಕ ಮಂಡಳಿ ಮತ್ತು ಹಿರಿಯ ಆಡಳಿತವರ್ಗದ ಪಾತ್ರ:

ಕಂಪನಿಯ ನಿರ್ದೇಶಕ ಮಂಡಳಿಯು ಈ ಮುಂದಿನ ಕಾರ್ಯಗಳನ್ನು ನೋಡಿಕೊಳ್ಳಬೇಕಿರುತ್ತದೆ,

- ಅನುಮೋದನೆ ಮತ್ತು ಅಳವಡಿಕೆಗೂ ಮೊದಲು ಸಿಎಸ್‌ಆರ್ ಸಮಿತಿಯಿಂದ ಶಿಫಾರಸ್ಸು ಮಾಡಲಾಗುವ ಸಿಎಸ್‌ಆರ್ ಪಾಲಿಸಿಯನ್ನು ಪರಿಶೀಲಿಸುವುದು, ಅನುಮೋದಿಸುವುದು ಹಾಗೂ ಅಳವಡಿಸಿಕೊಳ್ಳುವುದು. ಮುಂದುವರೆದು, ತನ್ನ ವರದಿಯಲ್ಲಿ ಇಂಥ ಪಾಲಿಸಿಯ ವಿಷಯಸಾಮಗ್ರಿಗಳನ್ನು ಬಹಿರಂಗಪಡಿಸುವುದು ಹಾಗೂ ಅದನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಲಭ್ಯವಾಗಿಸುವುದು.
- ಕಂಪನಿಯಿಂದ ಸಿಎಸ್‌ಆರ್ ಚಟುವಟಿಕೆಗಳು ಕೈಗೊಳ್ಳಲ್ಪಡುವಂತೆ ನೋಡಿಕೊಳ್ಳುವುದು
- ಸಿಎಸ್‌ಆರ್ ಚಟುವಟಿಕೆಗಳ ಮೇಲೆ ಎರಡು ಪ್ರತಿಶತವನ್ನು ವ್ಯಯಿಸುವಂತೆ ನೋಡಿಕೊಳ್ಳುವುದು
- ನಿರ್ದೇಶಕರ ವರದಿಯಲ್ಲಿ ಸಿಎಸ್‌ಆರ್ ಚಟುವಟಿಕೆಗಳನ್ನು ವರದಿ ಮಾಡುವುದು ಹಾಗೂ ಸಿಎಸ್‌ಆರ್ ಉಪಬಂಧಗಳ ಅನನುಸರಣೆಯನ್ನು (ಯಾವುದಾದರೂ ಇದ್ದಲ್ಲಿ) ಅದರ ಕಾರಣಗಳೊಂದಿಗೆ ಬಹಿರಂಗಪಡಿಸುವುದು.
- ಒಳಗೊಂಡಿರುವ ಪ್ರಯೋಜನಗಳು ಮತ್ತು ವೆಚ್ಚಗಳನ್ನು ತಿಳಿಸುತ್ತಾ, ಅನುಸೂಚಿ VII ರಡಿಯಲ್ಲಿ ನಿರ್ದಿಷ್ಟಪಡಿಸಿದ ಚಟುವಟಿಕೆಗಳಲ್ಲಿಂದ ಗುರುತಿಸಬೇಕಿರುವ ಚಟುವಟಿಕೆಗಳನ್ನು ಒಳಗೊಂಡಿರುವ ಸೂಚನೆಯನ್ನು ಕಂಪನಿಯು ಮಂಡಳಿಯ ಮುಂದೆ ಇರಿಸತಕ್ಕದ್ದು. ಈ ಚಟುವಟಿಕೆಯನ್ನು ಗುರುತಿಸಲು ಅವಶ್ಯಕವಾಗುವಂಥ ಎಲ್ಲ ಕಾರ್ಯಗಳನ್ನು ನಡೆಸಲು ಮತ್ತು ಅದಕ್ಕೆ ಕೊಡುಗೆ ನೀಡಲು ಆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಿಗೆ ಮಂಡಳಿಯು ಅಧಿಕಾರ ನೀಡಬಹುದು.
- ಅನುಸೂಚಿ VII ರ ವ್ಯಾಪ್ತಿಯೊಳಗಡೆ ಬರದಿರುವ ಚಟುವಟಿಕೆಯೊಂದನ್ನು ಪರಿಗಣಿಸತಕ್ಕದ್ದಲ್ಲ.
- ವರ್ಷಕ್ಕೆ ಒಮ್ಮೆ ಅಥವಾ ಸೂಕ್ತವಾಗುವಂಥ ಮಧ್ಯಂತರಗಳಲ್ಲಿ ಮಂಡಳಿಯ ಮುಂದೆ ಸಿಎಸ್‌ಆರ್ ಪಾಲಿಸಿಯ ಪುನರಾವಲೋಕನವನ್ನು ಇರಿಸತಕ್ಕದ್ದು. ಈ ಪುನರಾವಲೋಕನವು, ಸಿಎಸ್‌ಆರ್ ಅನ್ನು ನಡೆಸುವದಕ್ಕಾಗಿ ಚಟುವಟಿಕೆಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿದಂತೆ ಕಂಪನಿಯಿಂದ ಕೈಗೊಂಡ

ನಿರ್ಧಾರಗಳು ಸಿಎಸ್‌ಆರ್ ಪಾಲಿಸಿಗೆ ಅನುಗುಣವಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವಿಕೆಯಂಥ ಅಂಶಗಳನ್ನು ಒಳಗೊಳ್ಳುತ್ತದೆ.

- ಕಂಪನಿಯ ಹಿರಿಯ ಆಡಳಿತವರ್ಗವು ಈ ಮುಂದಿನವುಗಳ ಜವಾಬ್ದಾರಿಯನ್ನು ಹೊಂದಿರುತ್ತದೆ:
  - ಮಂಡಳಿಯಿಂದ ಅನುಮೋದಿಸಲ್ಪಡುವ ಪಾಲಿಸಿಯ ಮೇಲೆ ಆಧರಿತವಾಗಿ, ಗುರುತಿಸಲ್ಪಟ್ಟ ಸಿಎಸ್‌ಆರ್ ಚಟುವಟಿಕೆಗಳ ಅಪಾಯ ಹಾಗೂ ಖರ್ಚು ಪ್ರಯೋಜನಗಳನ್ನು ಮೌಲ್ಯಮಾಪನ ಮಾಡುವುದು.
  - ಸಿಎಸ್‌ಆರ್ ಚಟುವಟಿಕೆಯನ್ನು ಗುರುತಿಸುವುದಕ್ಕಾಗಿ ಅಳವಡಿಸಿಕೊಳ್ಳುವ ಕಾರ್ಯವಿಧಾನಗಳ ಪರಿಣಾಮಕತೆಯನ್ನು ಆಗಾಗ್ಗೆ ಪುನರಾವಲೋಕಿಸುವುದು.

## 8. ಸಿಎಸ್‌ಆರ್ ಪಾಲಿಸಿಯ ಅನುಷ್ಠಾನಗೊಳಿಸುವಿಕೆ:

ಕಂಪನಿಯು ತನ್ನ ಸಿಎಸ್‌ಆರ್ ಚಟುವಟಿಕೆಗಳನ್ನು ಈ ಮುಂದಿನ ವಿಧಾನಗಳ ಮೂಲಕ ಅನುಷ್ಠಾನಗೊಳಿಸಬಹುದು:

- ನೇರವಾಗಿ ಸ್ವತಃ ತಾನೇ.
- ಈ ಉಪಕ್ರಮವನ್ನು ಸುಗಮಗೊಳಿಸಲು ಅನುವಾಗುವಂತೆ ಸ್ಥಾಪಿಸಲ್ಪಟ್ಟ ತನ್ನ ಸ್ವಂತದ ಲಾಭ-ರಹಿತ ಪ್ರತಿಷ್ಠಾನದ ಮುಖಾಂತರ.
- ಇಂಥಹದ್ದೇ ಸಂಬಂಧಿಸಿದ ಚಟುವಟಿಕೆಗಳಲ್ಲಿ ಕನಿಷ್ಠ ಪಕ್ಷ ಮೂರು ವರ್ಷಗಳ ದಾಖಲೆಯನ್ನು ಹೊಂದಿರುವ, ಸ್ವತಂತ್ರವಾಗಿ ನೋಂದಾಯಿಸಲ್ಪಟ್ಟಿರುವ ಲಾಭ-ರಹಿತ ಸಂಸ್ಥೆಗಳ ಮುಖಾಂತರ.
- ತಮ್ಮ ಸಂಪನ್ಮೂಲಗಳನ್ನು ಬೇರೆ ಕಂಪನಿಗಳೊಂದಿಗೆ ಸಹಯೋಗ ಅಥವಾ ಒಗ್ಗೂಡಿಸುವ ಮೂಲಕ.
- ಭಾರತದಲ್ಲಿ ಕೈಗೊಂಡ ಸಿಎಸ್‌ಆರ್ ಚಟುವಟಿಕೆಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುವುದು.
- ಉದ್ಯೋಗಿಗಳು ಮತ್ತವರ ಕುಟುಂಬದವರಿಗಾಗಿ ವಿಶಿಷ್ಟವಾಗಿ ಉದ್ದೇಶಿಸಲಾದ ಚಟುವಟಿಕೆಗಳು ಸಿಎಸ್‌ಆರ್ ಚಟುವಟಿಕೆಗಳಾಗಿ ಅರ್ಹತೆಯನ್ನು ಪಡೆಯುವುದಿಲ್ಲ.

## 9. ವರದಿ ಮಾಡುವಿಕೆ:

ಸಿಎಸ್‌ಆರ್ ಸಮಿತಿಯಿಂದ ಮಾಡಲ್ಪಡುವ ಶಿಫಾರಸ್ಸುಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರ ಕಂಪನಿಯ ಮಂಡಳಿಯು ಆ ಕಂಪನಿಗಾಗಿ ಸಿಎಸ್‌ಆರ್ ಪಾಲಿಸಿಯನ್ನು ಅನುಮೋದಿಸುವುದು ಹಾಗೂ ತಮ್ಮ ವರದಿಯಲ್ಲಿ ಅದರ ಅಂಶಗಳನ್ನು ಬಹಿರಂಗಪಡಿಸುವುದು ಹಾಗೂ ಕಂಪನಿಯ ಅಧೀಕೃತ ವೆಬ್‌ಸೈಟ್‌ನಲ್ಲಿ ವಿವರಗಳೇನಾದರೂ ಇದ್ದಲ್ಲಿ ಅವುಗಳನ್ನೂ ಸಹ, ಶಿಫಾರಸ್ಸು ಮಾಡಬಹುದಾದಂಥ ರೀತಿಯಲ್ಲಿ ಪ್ರಕಟಿಸುವುದು ಹಾಗೂ ಶಿಫಾರಸ್ಸು ಮಾಡಿದ ಮೊತ್ತವನ್ನು ವ್ಯಯಿಸಲು ಕಂಪನಿಯು ವಿಫಲವಾದಲ್ಲಿ, ಮಂಡಳಿಯು ತನ್ನ ವರದಿಯಲ್ಲಿ ಅದರ ಕಾರಣಗಳನ್ನು ನಿರ್ದಿಷ್ಟಪಡಿಸುವುದು 2013 ರ ಕಂಪನಿಗಳ ಕಾಯ್ದೆಗೆ ಅವಶ್ಯವಾಗಿರುತ್ತದೆ.

## 10. ಅವಲೋಕಿಸುವಿಕೆ ಮತ್ತು ಪುನರಾವಲೋಕನ

- ಅನುಸರಣಾ ವಿಭಾಗದಿಂದ ಅನುಸರಣೆಯ ಕಾಲಕಾಲಿಕ ಅವಲೋಕನವು ಮಾಡಲ್ಪಡತಕ್ಕದ್ದು. ಆಯಾ ಆರ್ಥಿಕ ವರ್ಷದಲ್ಲಿ ಪ್ರತಿ ತ್ರೈಮಾಸಿಕದಲ್ಲಿ ಸಿಎಸ್‌ಆರ್ ಚಟುವಟಿಕೆಗಳ ಕಡೆಗೆ ಮಾಡಲಾಗುವ ಕೊಡುಗೆ ಹಾಗೂ ತ್ರೈಮಾಸಿಕದವರೆಗೆ ಸಂಚಿತ ಆಧಾರದಲ್ಲಿ ಮಾಡಲಾಗುವ ಕೊಡುಗೆಗಳ ವಿವರವಾದ ವರದಿಯನ್ನು ನಿರ್ವಹಿಸಿ, ಮಂಡಳಿಗೆ ತಿಳಿಯಪಡಿಸತಕ್ಕದ್ದು.
- ಪ್ರತಿ ಆರ್ಥಿಕ ವರ್ಷದಲ್ಲಿ, ತನ್ನ ಸಿಎಸ್‌ಆರ್ ಪಾಲಿಸಿಯ ಅನುಸರಣೆಯಲ್ಲಿ ಅಗತ್ಯ ಮೊತ್ತವನ್ನು ಕಂಪನಿಯು ವ್ಯಯಿಸುವಂತೆ ಅನುಸರಣಾ ಅಧಿಕಾರಿಯು ನೋಡಿಕೊಳ್ಳತಕ್ಕದ್ದು.
- ಕೈಗೊಳ್ಳಲಾಗುವ ಸಿಎಸ್‌ಆರ್ ಚಟುವಟಿಕೆಗಳು ನಿರ್ದೇಶಕರ ವರದಿಯಲ್ಲಿ ವರದಿ ಮಾಡಲ್ಪಡುವಂತೆ ಹಾಗೂ ಮತ್ತು ಅನನುಸರಣೆಯನ್ನು (ಯಾವುದಾದರೂ ಇದ್ದಲ್ಲಿ) ಅದರ ಕಾರಣಗಳೊಂದಿಗೆ ನಿರ್ದಿಷ್ಟಪಡಿಸುವಂತೆ ಅನುಸರಣಾ ಅಧಿಕಾರಿಯು ನೋಡಿಕೊಳ್ಳತಕ್ಕದ್ದು.

**************